


ಮುತ್ತಜ್ಜಿ ಲಕ್ಷ್ಮಿ ಅವರೊಂದಿಗೆ...

# ‘ಸಾವ್ಕಾರ್ ಮಂದಿ’ಗೆ ಸೂರಜ್ ಹಾಸ್ಯದೌತಣ

ಪೋಷಕರ ಪ್ರಭಾವದಿಂದ ಬಾಲ್ಯದಲ್ಲೇ ನಟನೆಯತ್ತ ಆಸಕ್ತಿ ಬೆಳೆಸಿಕೊಂಡ ಸೂರಜ್ ಕಿರುತೆರೆ, ಸಿನಿಮಾದಲ್ಲಿ ನಟಿಸಿದ್ದಾರೆ. ಮುತ್ತಜ್ಜಿ ಲಕ್ಷ್ಮಿ ನಾಯ್ಕ ಅವರ ಜೊತೆ ಸೇರಿ ತಮ್ಮ ಸುತ್ತಮುತ್ತಲು ನಡೆಯುವ ಹಾಸ್ಯ ಪ್ರಸಂಗಗಳನ್ನೇ ಬಳಸಿ ವಿಡಿಯೊ ರೂಪಿಸುತ್ತಿದ್ದಾರೆ. ಇದರಿಂದ ಅವರದೇ ಆದ ಅಭಿಮಾನಿ ಬಳಗವನ್ನೂ ಪಡೆದಿದ್ದಾರೆ.

■ ಗಣಪತಿ ಹೆಗಡೆ

‘ನಮಸ್ಕಾರ್ರಿ ಸಾವ್ಕಾರ್ ಮಂದಿ’ ಎಂದು ಸಂಬೋಧಿಸುತ್ತ ವಿಡಿಯೊ ಆರಂಭಿಸುವ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ಮಂಚಿಕೇರಿ ಗ್ರಾಮದ ಎ.ಎಸ್. ಸೂರಜ್ ತನ್ನ ಆಂಗಿಕ ಅಭಿನಯ, ಹಾಸ್ಯಭರಿತ ಮಾತುಗಳ ಮೂಲಕ ಜನರನ್ನು ಭರಪೂರ ರಂಜಿಸುತ್ತಿರುವ ಯೂಟ್ಯೂಬರ್. ಜೊತೆಗೆ ಕನ್ನಡ ಸಿನಿಮಾರಂಗದಲ್ಲಿ ಅಂಬೆಗಾಲಿಡುತ್ತಿರುವ ಅದ್ಭುತ ಪ್ರತಿಭೆ.

ಇಳಿ ವಯಸ್ಸಿನ ಅಜ್ಜಿಯೊಂದಿಗೆ ಹರಟುತ್ತ, ಮತ್ತೊಮ್ಮೆ ಉತ್ತರ ಕರ್ನಾಟಕದ ಭಾಷೆಯ ಸೊಗಡಿನೊಂದಿಗೆ ನಟಿಸುತ್ತ, ತನ್ನೂರಿನ ಸುತ್ತಮುತ್ತಲಿನ ಸ್ಥಳಗಳಲ್ಲಿ, ಮನೆಯಲ್ಲಿ ನಡೆಯುವ ಪ್ರಸಂಗಗಳನ್ನೇ ಹಾಸ್ಯವಸ್ತುವಾಗಿ ಬಳಸಿ ವಿಡಿಯೊ ಕಂಟೆಂಟ್ ಸಿದ್ಧಪಡಿಸುವ ಸೂರಜ್ ತನ್ನದೇ ಆದ ಅಭಿಮಾನಿ ಬಳಗ ಹೊಂದಿದ್ದಾರೆ. ಮುತ್ತಜ್ಜಿ ಲಕ್ಷ್ಮಿ, ಪಾಪಣ್ಣನೊಂದಿಗೆ ಸೂರಜ್ ಕಾಣಿಸಿಕೊಂಡರಂತೂ ಜನರಿಗೆ ಹಾಸ್ಯದ ರಸದೌತಣ ಉಣಬಡಿಸುವುದು ಗ್ಯಾರಂಟಿ!

ಅದು 2016ರ ಸಮಯ. ಆಗಸ್ಟ್ 11ರ ಹರೆಯದ ಸೂರಜ್ ಕಿರುತೆರೆಯ ‘ಡ್ರಾಮಾ ಜ್ಯೂನಿಯರ್ಸ್’ ಶೋದಲ್ಲಿ ಕಾಣಿಸಿಕೊಂಡಿದ್ದರು. ಅವರ ಹಾಸ್ಯ ನಟನೆಗೆ ಬೆರಗಾಗಿದ್ದ ಪ್ರೇಕ್ಷಕರು ಬಾಲಕನ ನಟನೆ ಕಣ್ತುಂಬಿಕೊಳ್ಳಲು ಪ್ರತಿ ವಾರ ಕಾಯುತ್ತಿದ್ದರು. ಈಗ ಅದೇ ಹುಡುಗ ಸಾಮಾಜಿಕ ಜಾಲತಾಣದಲ್ಲಿ ‘ಕಾಮಿಡಿ ಸ್ಟಾರ್’ ಆಗಿ ಮಿಂಚುತ್ತಿದ್ದಾರೆ.

ಯಾವುದೇ ನಟನೆಯ ಹಿನ್ನೆಲೆ ಇಲ್ಲದೇ ಕಿರುತೆರೆಗೆ ಕಾಲಿಟ್ಟ ಅವರು ನಂತರದ ದಿನಗಳಲ್ಲಿ ತಮ್ಮ ಹೆಸರಿನೊಂದಿಗೆ ತಮ್ಮನ್ನು ಹೊರಜಗತ್ತಿಗೆ ಪರಿಚಯಿಸಿದ